# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್ಸಿ ನಂ. 36/2014**

**ದೋ.ಸಾ. : 2 ಪ್ರಾ.ಸಾ. : 1**

| | | |
|---|---|---|
| ಸಾಕ್ಷಿಯ ಹೆಸರು | : | ಶ್ಯಾಮನಾಥ ವಿಶ್ವನಾಥ ನಾಯ್ಕ |
| ತಂದೆಯ ಹೆಸರು | : | ವಿಶ್ವನಾಥ ನಾಯ್ಕ |
| ವಯಸ್ಸು | : | 56 ವರ್ಷ |
| ಕೆಲಸ | : | ರೈತಾಪಿ. |
| ವಾಸ | : | ಬಾಳೆಮನೆ, ಕಾರವಾರ ತಾಲೂಕು. |

**ದಿನಾಂಕಃ 16–05–2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ದಿನಾಂಕ 15.02.2014 ರಂದು ಪೋಲಿಸರು ನನ್ನನ್ನು ಕದ್ರಾ ಗ್ರಾಮ ಪಂಚಾಯತಿ ವ್ಯಾಪ್ತಿಯ ರಾಜೀವ ನಗರದ ಮೃತ ವೇಲು ಇಲ್ಲನ್ ಗುಡಿ ಇವರ ಮನೆಯಲ್ಲಿ ಕೊಲೆಯಾಗಿದೆ ಎಂದು ಪಂಚನಾಮೆಗೆ ಕರೆಸಿದ್ದರು. ನಾನು ಬೆಳಗ್ಗೆ 7.00 ಗಂಟೆಗೆ ಸ್ಥಳಕ್ಕೆ ಹೋಗಿರುತ್ತೇನೆ. ನಾನು ಅಲ್ಲಿಗೆ ಹೋದಾಗ ಚಾಸಾ–1, ಚಾಸಾ–3 ಮತ್ತು ಚಾಸಾ–4 ಇದ್ದರು. ಮೃತ ವೇಲು ಇಲ್ಲನ್ ಗುಡಿ ರವರ ಮನೆಯ ಮೇಲ್ಛಾವಣಿಗೆ ಶೀಟ್ ನ್ನು ಹಾಕಲಾಗಿತ್ತು, ಮನೆಯ ಒಳಗೆ ಸಿಮೆಂಟ್ ನೆಲವಾಗಿತ್ತು ಮತ್ತು ಗೋಡೆಯನ್ನು ಚಿರೇ ಕಲ್ಲಿನಿಂದ ಕಟ್ಟಲಾಗಿತ್ತು. ಸದರಿ ಮನೆಯ ಪಕ್ಕದಲ್ಲಿ ವಿದ್ಯುತ್ ಕಂಬ ಇದ್ದು, ಸದರಿ ಕಂಬದಿಂದ ಮನೆಗೆ ವಿದ್ಯುತ್ ಸಂಪರ್ಕ ಹೊಂದಿದ್ದು, ನಾವು ಪಂಚನಾಮೆಯ ಕಾಲಕ್ಕೆ ಹೋದ ಸಮಯದಲ್ಲಿ ವಿದ್ಯುತ್ ಸಂಪರ್ಕದ ತಂತಿಯನ್ನು ಕತ್ತಿರಿಸಲಾಗಿತ್ತು.ಮನೆಯ ಹಾಲ್ ನಲ್ಲಿ ಒಂದು ಚಿಮಣಿ ದೀಪ ಇತ್ತು. ನಾವು ಮನೆಯ ಒಳಗೆ ಹೋಗಿ ನೋಡಿದಾಗ ಮನೆಯ ಸ್ವಿಚ್ ಬಟನ್ ಗಳು ಆನ್ ಆಗಿದ್ದವು. ಮನೆಯ ಹಾಲ್ ನಲ್ಲಿ ವೇಲು ರವರ ಮಗಳಾದ ಅಶ್ವಿನಿಯ ಶವ ಬಿದ್ದಿತ್ತು, ಶವದ ಕುತ್ತಿಗೆಯ ಹತ್ತಿರ ಯಾವುದೋ ಹರಿತವಾದ ಆಯುಧದಿಂದ ಕತ್ತರಿಸಿದ ಗಾಯವಾಗಿತ್ತು, ನೆಲದ ಮೇಲೆ ರಕ್ತ ಹರಡಿಕೊಂಡಿತ್ತು ಹಾಗೂ ಅಲ್ಲಲ್ಲಿ ರಕ್ತ ಚಿಮ್ಮಿತ್ತು. ಪೋಲಿಸರು ಸ್ಥಳದಲ್ಲಿ ರಕ್ತ ತಾಗಿದ ಸಿಮೆಂಟ್ ನೆಲದ ಚೂರು ಹಾಗೂ ರಕ್ತ ತಾಗದ ಸಿಮೆಂಟ್ ನೆಲದ ಚೂರನ್ನು ಕೆರೆದು ಜಪ್ತುಪಡಿಸಿಕೊಂಡರು.

**(ಈ ಹಂತದಲ್ಲಿ ಮಾನ್ಯ ಪಿ.ಪಿ. ರವರು ಎರಡು ಸೀಲಾದ ವಸ್ತುಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲು ಅನುಮತಿ ಕೋರಿದ್ದರು, ಸದ್ರಿ ವಸ್ತು ಮೇಲೆ ಇದ್ದ ಸೀಲು ಸುಸ್ಥಿತಿಯಲ್ಲಿ ಇರುವುದರಿಂದ ಮಾನ್ಯ ಪಿ.ಪಿ. ರವರಿಗೆ ಅದನ್ನು ತೆರೆಯಲು ಅನುಮತಿಸಲಾಯಿತು**).

ಸಾಕ್ಷಿಯು ರಕ್ತ ತಾಗಿದ ಸಿಮೆಂಟ್ ನೆಲದ ಚೂರು ಹಾಗೂ ರಕ್ತ ತಾಗದ ಸಿಮೆಂಟ್ ನೆಲದ ಚೂರನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ಮು.ಮಾ 1 ಮತ್ತು 2 ಎಂದು, ಅವುಗಳ ಮೇಲಿನ ಸಾಕ್ಷಿಯ ರುಜುವನ್ನು ಮು.ಮಾ 1(ಎ) ಮತ್ತು (2) ಎಂದು ಗುರುತಿಸಲಾಯಿತು.

2. ಸದರಿ ಮನೆಯಲ್ಲಿ ಒಟ್ಟು 4 ಕೋಣೆಗಳು ಇದ್ದವು. ಸ್ಥಳದಲ್ಲಿ ಚಾಸಾ–1 ರವರು ಪೋಲಿಸರಿಗೆ ಹಾಲ್ ನ ಪಕ್ಕದಲ್ಲಿ ಇದ್ದ ರೂಮ್ ನ್ನು ತೋರಿಸಿ ವೇಲುವಿನ ಹೆಂಡತಿ ಜಾನಕಿ ಇದೇ ಸ್ಥಳದಲ್ಲಿ ಬಿದ್ದಿದ್ದಳು ಹಾಗೂ ಅವಳ ಕೈ ಕತ್ತರಿಸಲಾಗಿತ್ತು ಮತ್ತು ಅವಳ ಕುತ್ತಿಗೆಗೆ ಕತ್ತಿಯಿಂದ ಹೊಡೆಯಲಾಗಿತ್ತು ಎಂದು ತೋರಿಸಿದರು. ನಂತರ ಮನೆಯ ಕೋಣೆಯ ಒಳಗೆ ಹೋದಾಗ ನೆಲದ ಮೇಲೆ ರಕ್ತ ತಾಗಿದ ಪಾದದ ಗುರುತು ಇತ್ತು. ಆಗ ಪೋಲಿಸರು ಆ ಸ್ಥಳದ ರಕ್ತ ತಾಗಿದ ಮತ್ತು ರಕ್ತ ತಾಗದ ಸಿಮೆಂಟ್ ನ ಚೂರನ್ನು ಕೆರೆದು ಜಪ್ತುಪಡಿಸಿಕೊಂಡು, ಗುರುತು ಮಾಡಿಕೊಂಡರು.

**(ಈ ಹಂತದಲ್ಲಿ ಮಾನ್ಯ ಪಿ.ಪಿ. ರವರು ಎರಡು ಸೀಲಾದ ವಸ್ತುಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲು ಅನುಮತಿ ಕೋರಿದ್ದರು, ಸದ್ರಿ ವಸ್ತು ಮೇಲೆ ಇದ್ದ ಸೀಲು ಸುಸ್ಥಿತಿಯಲ್ಲಿ ಇರುವುದರಿಂದ ಮಾನ್ಯ ಪಿ.ಪಿ. ರವರಿಗೆ ಅದನ್ನು ತೆರೆಯಲು ಅನುಮತಿಸಲಾಯಿತು**).

ಸಾಕ್ಷಿಯು ರಕ್ತ ತಾಗಿದ ಸಿಮೆಂಟ್ ನೆಲದ ಚೂರು ಹಾಗೂ ರಕ್ತ ತಾಗದ ಸಿಮೆಂಟ್ ನೆಲದ ಚೂರನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ಮು.ಮಾ 3 ಮತ್ತು 4 ಎಂದು, ಅವುಗಳ ಮೇಲಿನ ಸಾಕ್ಷಿಯ ರುಜುವನ್ನು ಮು.ಮಾ 3(ಎ) ಮತ್ತು 4(ಎ) ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಬೆಳಗ್ಗೆ 7.35 ರಿಂದ 8.35 ರವರೆಗೆ ಬರೆದಿರುತ್ತಾರೆ. ವೇಲುರವರ ಮನೆಯ ಪಕ್ಕದಲ್ಲಿ ಪ್ರೇಮಾ ಮತ್ತು ಚಾಸಾ–27 ಕವಿತಾರವರ ಮನೆ ಇದೆ.

3. ಮೃತ ವೇಲು ಇಲ್ಲನ್ ಗುಡಿಯ ಮನೆಯಿಂದ 30 ಮೀಟರ್ ಅಂತರದಲ್ಲಿ ಕೊಡ್ಸಳ್ಳಿ ಡ್ಯಾಂ ಗೆ ಹೋಗುವ ರಸ್ತೆಯಿಂದ ಅರಣ್ಯ ಪ್ರದೇಶಕ್ಕೆ ಹೋಗುವ ಕಾಲು ದಾರಿಯಲ್ಲಿ ಮೃತ ವೇಲು ಇಲ್ಲನ್ ಗುಡಿ ಹಾಗೂ ಆತನ ಮಗನಾದ ಸತ್ಯನಾರಾಯಣ ಮೂರ್ತಿ ಶವ ಬಿದ್ದಿದ್ದು, ಅದನ್ನು ಚಾಸಾ-1 ರವರು ತೋರಿಸಿರುತ್ತಾರೆ. 2 ಶವಗಳು 15 ಅಡಿ ಅಂತರದಲ್ಲಿ ಬಿದ್ದಿರುತ್ತವೆ. ಮೊದಲಿಗೆ ಸತ್ಯನಾರಾಯಣ ಮೂರ್ತಿಯ ಶವ ನೋಡಿದ್ದು, ಆ ಶವದ ಮೇಲೆ ತಿಳಿ ನೀಲಿ ಬಣ್ಣದ ಕಾಟನ್ ಚಡ್ಡಿ , ತಿಳ ನೀಲಿ ಬಣ್ಣದ ಕಾಟನ್ ಶರ್ಟ ಇತ್ತು ಹಾಗೂ ಶವದ ಕುತ್ತಿಗೆಯ ಭಾಗದಲ್ಲಿ ಹರಿತವಾದ ಆಯುಧದಿಂದ ಕಡಿದ ಗಾಯವಾಗಿತ್ತು. ಶವ ಬಿದ್ದ ಸ್ಥಳದಲ್ಲಿ ರಕ್ತ ಚಲ್ಲಿತ್ತು ಹಾಗೂ ಸುತ್ತ ಮುತ್ತಲಿನ ಗಿಡದ ಎಲೆಗಳ ಮೇಲೆ ರಕ್ತ ಚಿಮ್ಮಿತ್ತು. ಪೋಲಿಸರು ರಕ್ತ ಚಿಮ್ಮಿದ ಎಲೆಯನ್ನು ಹಾಗೂ ರಕ್ತವಾಗದ ಎಲೆಯನ್ನು ಮತ್ತು ರಕ್ತ ಮಿಶ್ರಿತ ಮಣ್ಣು ಹಾಗೂ ರಕ್ತ ಮಿಶ್ರಿತವಲ್ಲದ ಮಣ್ಣನ್ನು ಜಪ್ತುಪಡಿಸಿಕೊಂಡು, ಅವುಗಳನ್ನು ಪ್ರತ್ಯೇಕವಾಗಿ ಕವರ್ ಗಳಲ್ಲಿ ಹಾಕಿ, ಸೀಲು ಮಾಡಿದರು.

**(ಈ ಹಂತದಲ್ಲಿ ಮಾನ್ಯ ಪಿ.ಪಿ. ರವರು ನಾಲ್ಕು ಸೀಲಾದ ವಸ್ತುಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲು ಅನುಮತಿ ಕೋರಿದ್ದರು, ಸದ್ರಿ ವಸ್ತು ಮೇಲೆ ಇದ್ದ ಸೀಲು ಸುಸ್ಥಿತಿಯಲ್ಲಿ ಇರುವುದರಿಂದ ಮಾನ್ಯ ಪಿ.ಪಿ. ರವರಿಗೆ ಅದನ್ನು ತೆರೆಯಲು ಅನುಮತಿಸಲಾಯಿತು**).

ಸಾಕ್ಷಿಯು ರಕ್ತ ಚಿಮ್ಮಿದ ಎಲೆಯನ್ನು ಹಾಗೂ ರಕ್ತವಾಗದ ಎಲೆಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ಮು.ಮಾ 5 ಮತ್ತು 6 ಎಂದು ಅವುಗಳ ಮೇಲಿನ ಸಾಕ್ಷಿಯ ರುಜುವನ್ನು ಮು.ಮಾ 5(ಎ) ಮತ್ತು 6(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು ರಕ್ತ ಮಿಶ್ರಿತ ಮಣ್ಣು ಹಾಗೂ ರಕ್ತ ಮಿಶ್ರಿತವಲ್ಲದ ಮಣ್ಣನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಮು.ಮಾ 7 ಮತ್ತು 8 ಎಂದು, ಅವುಗಳ ಮೇಲಿನ ಸಾಕ್ಷಿಯ ರುಜುವನ್ನು ಮು.ಮಾ 7(ಎ) ಮತ್ತು 8(ಎ) ಎಂದು ಗುರುತಿಸಲಾಯಿತು.

4. ಸತ್ಯನಾರಾಯಣ ಮೂರ್ತಿ ಶವ ಬಿದ್ದ ಸ್ಥಳದಿಂದ 15 ಅಡಿ ಅಂತರದಲ್ಲಿ ವೇಲು ಇಲ್ಲನ್ ಗುಡಿಯ ಶವ ಬಿದ್ದಿರುತ್ತದೆ. ಪೋಲಿಸರು ವೇಲು ಇಲ್ಲನ್ ಗುಡಿಯ ಶವವನ್ನು ಪರಿಶೀಲಿಸಿದಾಗ ಶವದ ಮೇಲೆ ಬಿಳಿ ಬಣ್ಣದ ಲುಂಗಿ, ಕಂದು ಮತ್ತು ಬಿಳಿ ಬಣ್ಣದ ಶರ್ಟ್ ಇರುತ್ತದೆ ಹಾಗೂ

ಶವದ ಕುತ್ತಿಗೆ, ತಲೆ ಹಾಗೂ ಕೈ ಮೇಲೆ ಹರಿತವಾದ ಆಯುಧದಿಂದ ಕಡಿದ ಗಾಯಗಳು ಆಗಿದ್ದವು. ಶವ ಬಿದ್ದ ಸ್ಥಳದಲ್ಲಿ ರಕ್ತ ಚಲ್ಲಿತ್ತು ಹಾಗೂ ಸುತ್ತ ಮುತ್ತ ಬಿದ್ದಂತಹ ಒಣ ಎಲೆಗಳ ಮೇಲೆ ರಕ್ತ ಚಿಮ್ಮಿತ್ತು. ಪೋಲಿಸರು ರಕ್ತ ಚಿಮ್ಮಿದ ಎಲೆಯನ್ನು ಹಾಗೂ ರಕ್ತವಾಗದ ಎಲೆಯನ್ನು ಮತ್ತು ರಕ್ತ ಮಿಶ್ರಿತ ಮಣ್ಣು ಹಾಗೂ ರಕ್ತ ಮಿಶ್ರಿತವಲ್ಲದ ಮಣ್ಣನ್ನು ಜಪ್ತುಪಡಿಸಿಕೊಂಡು, ಅವುಗಳನ್ನು ಪ್ರತ್ಯೇಕವಾಗಿ ಕವರ್ ಗಳಲ್ಲಿ ಹಾಕಿ, ಸೀಲು ಮಾಡಿದರು. ಮೃತ ವೇಲು ಇಲ್ಲನ್ ಗುಡಿ ಅಂಗವಿಕಲನಾದ ಕಾರಣ ಆತನ ಶವದ ಪಕ್ಕದಲ್ಲಿ ಅಲ್ಯುಮೀನಿಯಮ್ ಊರಗೋಲು ಬಿದ್ದಿತ್ತು. ಪೋಲಿಸರು ಅದನ್ನು ನಮ್ಮ ಸಮಕ್ಷಮ ಜಪ್ತುಪಡಿಸಿಕೊಂಡರು.

**(ಈ ಹಂತದಲ್ಲಿ ಮಾನ್ಯ ಪಿ.ಪಿ. ರವರು ಐದು ಸೀಲಾದ ವಸ್ತುಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲು ಅನುಮತಿ ಕೋರಿದ್ದರು, ಸದ್ರಿ ವಸ್ತು ಮೇಲೆ ಇದ್ದ ಸೀಲು ಸುಸ್ಥಿತಿಯಲ್ಲಿ ಇರುವುದರಿಂದ ಮಾನ್ಯ ಪಿ.ಪಿ. ರವರಿಗೆ ಅದನ್ನು ತೆರೆಯಲು ಅನುಮತಿಸಲಾಯಿತು).**

ಸಾಕ್ಷಿಯು ರಕ್ತ ಚಿಮ್ಮಿದ ಎಲೆಯನ್ನು ಹಾಗೂ ರಕ್ತವಾಗದ ಎಲೆಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ಮು.ಮಾ 9 ಮತ್ತು 10 ಎಂದು ಅವುಗಳ ಮೇಲಿನ ಸಾಕ್ಷಿಯ ರುಜುವನ್ನು ಮು.ಮಾ 9(ಎ) ಮತ್ತು 10(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು ರಕ್ತ ಮಿಶ್ರಿತ ಮಣ್ಣು ಹಾಗೂ ರಕ್ತ ಮಿಶ್ರಿತವಲ್ಲದ ಮಣ್ಣನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಮು.ಮಾ 11 ಮತ್ತು 12 ಎಂದು, ಅವುಗಳ ಮೇಲಿನ ಸಾಕ್ಷಿಯ ರುಜುವನ್ನು ಮು.ಮಾ 11(ಎ) ಮತ್ತು 12(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಅಲ್ಯುಮೀನಿಯಮ್ ಊರಗೋಲು ನೋಡಿ ಗುರುತಿಸಿದ್ದು, ಅದನ್ನು ನಿಪಿ-13 ಎಂದು ಗುರುತಿಸಲಾಯಿತು. ಪೋಲಿಸರು ಬೆಳಿಗ್ಗೆ 8.40 ರಿಂದ 10.00 ಗಂಟೆಯವರೆಗೆ ಪಂಚನಾಮೆಯನ್ನು ಬರೆದು, ನಕಾಶೆ ತಯಾರಿಸಿ, ಛಾಯಾಚಿತ್ರ ತೆಗೆದರು.

**(ಈ ಹಂತದಲ್ಲಿ ಮಾನ್ಯ ಪಿ.ಪಿ. ರವರು ಮೂರು ಸೀಲಾದ ವಸ್ತುಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲು ಅನುಮತಿ ಕೋರಿದ್ದರು, ಸದ್ರಿ ವಸ್ತು ಮೇಲೆ ಇದ್ದ ಸೀಲು ಸುಸ್ಥಿತಿಯಲ್ಲಿ ಇರುವುದರಿಂದ ಮಾನ್ಯ ಪಿ.ಪಿ. ರವರಿಗೆ ಅದನ್ನು ತೆರೆಯಲು ಅನುಮತಿಸಲಾಯಿತು).**

ಸಾಕ್ಷಿಯು ಮೃತೆ ಅಶ್ವಿನಿ ಶವದ ಮೇಲೆ ಇದ್ದ 3 ಬಟ್ಟೆಗಳಾದ ಹಳದಿ, ಬಿಳಿ, ಹಸಿರು, ನೀಲಿ ಬಣ್ಣದ ಹೂವಿನ ಡಿಜೈನ್ ಉಳ್ಳ ಕೆಂಪು ಬಣ್ಣದ ಫ್ರಾಕ್, ಹಸಿರು ಬಣ್ಣದ ಒಳ ಫ್ರಾಕ್, ಹಳದಿ, ನೀಲಿ, ಕೇಸರಿ, ಬಿಳಿ ಬಣ್ಣದ ಡಿಜೈನ್ ಉಳ್ಳ ಕಪ್ಪು ಬಣ್ಣದ ಚಡ್ಡಿಗಳನ್ನು ನೋಡಿ ಗುರುತಿಸಿದ್ದು, ಕೆಂಪು ಬಣ್ಣದ ಫ್ರಾಕ್‌ನ್ನು ಮು.ಮಾ 14 ಎಂದು, ಹಸಿರು ಬಣ್ಣದ ಫ್ರಾಕ್ ನ್ನು ಮು.ಮಾ 15 ಎಂದು, ಕಪ್ಪು ಚಡ್ಡಿಯನ್ನು ಮು.ಮಾ 16 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಪಿ.ಪಿ. ರವರು ಎರಡು ಸೀಲಾದ ವಸ್ತುಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲು ಅನುಮತಿ ಕೋರಿದ್ದರು, ಸದ್ರಿ ವಸ್ತು ಮೇಲೆ ಇದ್ದ ಸೀಲು ಸುಸ್ಥಿತಿಯಲ್ಲಿ ಇರುವುದರಿಂದ ಮಾನ್ಯ ಪಿ.ಪಿ. ರವರಿಗೆ ಅದನ್ನು ತೆರೆಯಲು ಅನುಮತಿಸಲಾಯಿತು)**.

ಸಾಕ್ಷಿಯು ಮೃತ ಸತ್ಯನಾರಾಯಣ ಮೂರ್ತಿ ಶವದ ಮೇಲೆ ಇದ್ದ 2 ಬಟ್ಟೆಗಳಾದ ತಿಳಿ ನೀಲಿ ಬಣ್ಣದ ರೆಡಿಮೆಡ್ ಚಡ್ಡಿ ಮತ್ತು ತಿಳಿ ನೇರಳೆ ಬಣ್ಣದ ರೆಡಿಮೆಡ್ ಶರ್ಟಗಳನ್ನು ನೋಡಿ ಗುರುತಿಸಿದ್ದು, ನೀಲಿ ಬಣ್ಣದ ರೆಡಿಮೆಡ್ ಚಡ್ಡಿಯನ್ನು ಮು.ಮಾ 17 ಎಂದು, ತಿಳಿ ನೇರಳೆ ಬಣ್ಣದ ರೆಡಿಮೆಡ್ ಶರ್ಟ್‌ನ್ನು ಮು.ಮಾ 18 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಪಿ.ಪಿ. ರವರು ಮೂರು ಸೀಲಾದ ವಸ್ತುಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲು ಅನುಮತಿ ಕೋರಿದ್ದರು, ಸದ್ರಿ ವಸ್ತು ಮೇಲೆ ಇದ್ದ ಸೀಲು ಸುಸ್ಥಿತಿಯಲ್ಲಿ ಇರುವುದರಿಂದ ಮಾನ್ಯ ಪಿ.ಪಿ. ರವರಿಗೆ ಅದನ್ನು ತೆರೆಯಲು ಅನುಮತಿಸಲಾಯಿತು)**.

ಸಾಕ್ಷಿಯು ಮೃತ ವೇಲು ಇಲ್ಲನ್ ಗುಡಿಯ ಶವದ ಮೇಲೆ ಇದ್ದ 3 ಬಟ್ಟೆಗಳಾದ ಕಂದು ಮತ್ತು ಬಿಳಿ ಬಣ್ಣದ ಉದ್ದ ಅಡ್ಡ ಗೇರೆವುಳ್ಳ ಪೂರ್ಣ ತೋಳಿನ ಶರ್ಟ, ಹಳದಿ ಬಣ್ಣದ ಬೊರ್ಡರ ಇರುವ ಬಿಳಿ ಬಣ್ಣದ ಲುಂಗಿ ಮತ್ತು ಹಸಿರು ಬಣ್ಣದ ಅಂಡರವೇರ್ ನೋಡಿ ಗುರುತಿಸಿದ್ದು, ಕಂದು ಮತ್ತು ಬಿಳಿ ಬಣ್ಣದ ಉದ್ದ ಅಡ್ಡ ಗೇರೆವುಳ್ಳ ಪೂರ್ಣ ತೋಳಿನ ಶರ್ಟ ನ್ನು ಮು.ಮಾ 19 ಎಂದು, ಹಳದಿ ಬಣ್ಣದ ಬೊರ್ಡರ ಇರುವ ಬಿಳಿ ಬಣ್ಣದ ಲುಂಗಿಯನ್ನು ಮು.ಮಾ 20 ಎಂದು ಮತ್ತು ಹಸಿರು ಬಣ್ಣದ ಅಂಡರವೇರ್ ನ್ನು ಮು.ಮಾ 21 ಎಂದು ಗುರುತಿಸಲಾಯಿತು.

5. ಪಂಚನಾಮೆಯ ನಂತರ ಪೋಲಿಸರು 3 ಶವಗಳನ್ನು ಕಾರವಾರ ಸಿವಿಲ್ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆ. ಸಾಕ್ಷಿಯು ಸ್ಥಳ ಪಂಚನಾಮೆ ಹಾಗೂ ನಕಾಶೆಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-1 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು, ನಕಾಶೆಯನ್ನು ನಿಪಿ-2 ಎಂದು ಗುರುತಿಸಲಾಯಿತು. ಪಂಚನಾಮೆಯ ಕಾಲಕ್ಕೆ ತೆಗೆದ ಒಟ್ಟು 14 ಛಾಯಾಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು 65(ಬಿ) ಪ್ರಮಾಣ ಪತ್ರದೊಂದಿಗೆ ಹಾಜರು ಮಾಡಿಲ್ಲದ ಕಾರಣ ಅವುಗಳನ್ನು ಗುರುತಿಸಲು ಆರೋಪಿಪರ ವಕೀಲರು ತಕರಾರು ಮಾಡಿದ್ದು, ಸದರಿ ಛಾಯಾಚಿತ್ರಗಳನ್ನು ತಕರಾರಿಗೆ ಒಳಪಟ್ಟು ನಿಪಿ-3 ರಿಂದ 16 ಎಂದು ಗುರುತಿಸಲಾಯಿತು.

6. ಆ ನಂತರ ಪೋಲಿಸರು ನಮ್ಮನ್ನು ಶವ ಪಂಚನಾಮೆಗೆ ಕಾರವಾರದ ಸಿವಿಲ್ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು, ಆಸ್ಪತ್ರೆಯ ಶವಗಾರದಲ್ಲಿ ಸತ್ಯನಾರಾಯಣ ಮೂರ್ತಿಯ ಶವವಿದ್ದು, ಅದನ್ನು ನಾನು ಹಾಗೂ ಚಾಸಾ-1 ರವರು ನೋಡಿ ಗುರುತಿಸುತ್ತೇವೆ. ನಮ್ಮ ಸಮಕ್ಷಮ ಪೊಲೀಸರು ಶವ ಪಂಚನಾಮೆಯನ್ನು ಮಾಡಿದರು. ಶವ ಪಂಚನಾಮೆಯ ಕಾಲಕ್ಕೆ ಶವವನ್ನು ಪರಿಶೀಲಿಸಿದಾಗ ಎರಡೂ ಕಿವಿಗಳಲ್ಲಿ ಸಣ್ಣ ಒಲೆಗಳು ಇದ್ದವು, ಸೊಂಟದಲ್ಲಿ ಉಡದಾರ ಇತ್ತು, ಮೈಮೇಲೆ ಬಟ್ಟೆ ಇತ್ತು. ಕುತ್ತಿಗೆಯ ಎಡಭಾಗದಲ್ಲಿ ಹರಿತವಾದ ಕತ್ತಿಯಿಂದ ಕಡಿದ ಗಾಯವಾಗಿತ್ತು ಹಾಗೂ ಎಲುಬು ಕಾಣುತ್ತಿತ್ತು. ಶವ ಪಂಚನಾಮೆಯನ್ನು ಬೆಳಿಗ್ಗೆ 11.40 ರಿಂದ 1.10 ರವರೆಗೆ ಮಾಡಿರುತ್ತಾರೆ. ಶವ ಪಂಚನಾಮೆಯ ಕಾಲಕ್ಕೆ ಛಾಯಾಚಿತ್ರಗಳನ್ನು ಸಹ ತೆಗೆದಿರುತ್ತಾರೆ. ಸಾಕ್ಷಿಯು ಶವ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-17 ಎಂದು, ಸಾಕ್ಷಿಯ ರುಜುವನ್ನು ನಿಪಿ-17(ಎ) ಎಂದು ಗುರುತಿಸಲಾಯಿತು. ಶವ ಪಂಚನಾಮೆ ಕಾಲಕ್ಕೆ ತೆಗೆದ 2 ಛಾಯಾಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-18 ಮತ್ತು 19 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ನ್ಯಾಯವಾದಿ ಶ್ರೀ ಎ.ಎ.ಎ ವಕೀಲರಿಂದ**

7. ಪೋಲಿಸರು ಪಂಚನಾಮೆಗೆ ಬರುವಂತೆ ನನಗೆ ಲಿಖಿತವಾಗಿ ಯಾವುದೇ ನೋಟಿಸಲು ನೀಡಿರುವುದಿಲ್ಲ ಹಾಗೂ ಪೋಲಿಸರು ಹೆಸರು ನನಗೆ ಗೊತ್ತಿರುವುದಿಲ್ಲ. ಪೋಲಿಸರು ನಮ್ಮ ಮನೆಗೆ ಬಂದು ಕರೆದಿರುತ್ತಾರೆ. ಪೋಲಿಸರು ನನ್ನನ್ನು ಮನೆಗೆ ಬಂದು ಕರೆದಾಗ ಬೆಳಿಗ್ಗೆ 7.00 ಗಂಟೆಯಾಗಿರುತ್ತದೆ. ನನ್ನ ಮನೆಯಿಂದ ಮೃತ ವೇಲುವಿನ ಮನೆ ಅರ್ಧ ಕಿ.ಮಿ ಇರುತ್ತದೆ. ಬೈಕ್

ನಲ್ಲಿ ಹೋದರೆ 3–4 ನಿಮಿಷ ಆಗುತ್ತದೆ. ವೇಲು ಮನೆಯ ಅಕ್ಕಪಕ್ಕದಲ್ಲಿ ಸುಮಾರು ಮನೆಗಳಿವೆ ಎಂದರೆ ಸರಿ. ಪಂಚನಾಮೆಗೆ ಮಾಡಿದ ವಾರ ಅಂದರೆ ಯಾವ ದಿನ ಎಂದು ನನಗೆ ನೆನಪಿಲ್ಲ. ವಿದ್ಯುತ್ ಕಂಬದ ತಂತಿ ತುಂಡಾದ ಬಗ್ಗೆ ಪಂಚನಾಮೆಯಲ್ಲಿ ಬರೆದಿದ್ದಾರೆಯೇ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಾನು ಪಂಚನಾಮೆಗೆ ಹೋದಾಗ ಘಟನಾ ಸ್ಥಳದಲ್ಲಿ 50 ರಿಂದ 60 ಜನ ಇದ್ದರು, ಐದಾರು ಜನ ಪೋಲಿಸರು ಸಹ ಇದ್ದರು.

8. ನಾನು ಪಿ.ಯು.ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಈ ನ್ಯಾಯಾಲಯದಲ್ಲಿ ನನ್ನ ವಿರುದ್ಧ ಪ್ರಕರಣದ ಒಂದು ಬಾಕಿ ಇರುತ್ತದೆ ಎಂದರೆ ಸರಿ. ಸದರಿ ಪ್ರರಕಣ ಬಿಟ್ಟು ಬೇರೆ ಯಾವುದೇ ಪ್ರಕರಣ ನನ್ನ ಮೇಲೆ ಇರುವುದಿಲ್ಲ. ಯಾವುದಾದರೂ ಶವವನ್ನು ನೋಡಿದಾಗ ಅದರ ಮರಣ ಅಥವಾ ಗಾಯಗಳು ಹೇಗಾಯಿತು ಎಂದು ತಿಳಿದುಕೊಳ್ಳುವ ಬಗ್ಗೆ ಯಾವುದೇ ವಿಧ್ಯಾಭ್ಯಾಸ ಮಾಡಿಲ್ಲ ಎಂದರೆ ಸಾಕ್ಷಿಯು ಆ ಬಗ್ಗೆ ತಿಳಿದುಕೊಳ್ಳಲು ಯಾವುದೇ ವಿಧ್ಯಾಭ್ಯಾಸಗಳು ಇರುವುದಿಲ್ಲ, ಹಾಗೇಯೇ ನೋಡಿದರೆ ಗೊತ್ತಾಗುತ್ತದೆ ಎಂದು ನುಡಿಯುತ್ತಾರೆ. ಪಂಚನಾಮೆಗೆ ಹೋದಾಗ ಪೋಲಿಸರು ಮೊದಲು ಹಾಲ್ ನಲ್ಲಿ ಪ್ರವೇಶಿಸಿದರು ಹಾಗೂ ಆ ಸಮಯದಲ್ಲಿ ವಿದ್ಯುತ್ ಬೆಳಕು ಇರಲಿಲ್ಲ. ಹಾಲ್ ಮತ್ತು ರೂಮ್ ನ ಸಿಮೆಂಟ್ ನೆಲದ ಮೇಲೆ ಬಿದ್ದ ರಕ್ತದ ಮಾದರಿಯನ್ನು ಯಾವ ರೀತಿ ತೆಗೆದುಕೊಂಡರು ಎಂದು ನನಗೆ ಗೊತ್ತಿಲ್ಲ. ಆದರೆ ಪೋಲಿಸರು ತೆಗೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸಿಮೆಂಟ್ ನೆಲದ ಚೂರನ್ನು ಜಪ್ತುಪಡಿಸಿಕೊಂಡಾಗ ಅದನ್ನು ಯಾವುದರಲ್ಲಿ ಹಾಕಿದ್ದರು ನಂತರ ಅದನ್ನು ಯಾರಿಗೆ ನೀಡಿದರು ಎಂದರೆ ಸಾಕ್ಷಿಯು ಪೋಲಿಸರೇ ತೆಗೆದುಕೊಂಡಿರುತ್ತಾರೆ. ವೇಲು ಮತ್ತು ಸತ್ಯನಾರಾಯಣ ಮೂರ್ತಿ ರವರ ಶವ ಬಿದ್ದ ಸ್ಥಳದಲ್ಲಿ ಪೋಲಿಸರು ರಕ್ತ ಮಿಶ್ರಿತ ಮಣ್ಣು ಹಾಗೂ ಎಲೆಗಳನ್ನು ಯಾವ ಪದ್ಧತಿಯನ್ನು ಅಳವಡಿಸಿ ಜಪ್ತುಪಡಿಸಿಕೊಂಡರು ಎಂದರೆ ಸಾಕ್ಷಿಯು ಕೈ ಗ್ಲೌಸ್ ನ್ನು ಹಾಕಿ ಜಪ್ತುಪಡಿಸಿಕೊಂಡಿರುತ್ತಾರೆ. ಆ ಪೋಲಿಸರ ಹೆಸರು ನನಗೆ ಗೊತ್ತಿರುವುದಿಲ್ಲ. ಆ ದಿನ ಎಷ್ಟು ದಾಖಲೆಗಳ ಮೇಲೆ ನನ್ನ ಸಹಿಗಳನ್ನು ಪಡೆದುಕೊಂಡರು ಎಂದು ನಿಖರವಾಗಿ ಹೇಳಲು ಬರುವುದಿಲ್ಲ.

9. ಪಂಚನಾಮೆಯನ್ನು ಪೋಲಿಸರೇ ಬರೆದಿರುತ್ತಾರೆ, ಆದರೆ ಅವರ ಹೆಸರು ನನಗೆ ಗೊತ್ತಿರುವುದಿಲ್ಲ. ಮುದ್ದೆ ಮಾಲುಗಳ ಮೇಲೆ ಕದ್ರಾ ಪೋಲಿಸ್ ಠಾಣೆಯವರ ಸೀಲು ಈಗ ಇರುವುದಿಲ್ಲ ಎಂದರೆ ಸರಿ. ಸೀಲು ಮಾಡಿರುವ ವಸ್ತುಗಳನ್ನು ಅವುಗಳನ್ನು ತೆರೆಯದೇ ಹೇಳಲು

ಬರುವುದಿಲ್ಲ. ಸೀಲಾದ ವಸ್ತುಗಳಲ್ಲಿ ಏನು ಇರುತ್ತದೆ ಎಂದು ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿಯು ಪ್ರತಿಯೊಂದು ವಸ್ತುಗಳಿಗೆ ನಂಬರ್ ನೀಡಲಾಗುತ್ತದೆ ಎಂದು ನುಡಿಯುತ್ತಾರೆ. ಮು.ಮಾ ಗಳ ಮೇಲೆ ಯಾವ ಸೀಲನ್ನು ಹಾಕಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ.

**ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ